# 4 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿಸಿ ನಂ. 25167/2018 ಚಾಸಾಃ3 ಫ್ರಾಸಾಃ1

ಸಾಕ್ಷಿದಾರರ ಹೆಸರು: ಜಯರಾಮಯ್ಯ ಎಮ್.ಎಸ್
ತಂದೆಯ ಹೆಸರು : ಲೇಟ್ ಸಿದ್ದಪ್ಪ
ವಯಸ್ಸು : 49 ವರ್ಷ
ವೃತ್ತಿ: ಗ್ರಾನೈಟ್ ವ್ಯಾಪಾರ
ವಾಸ: ನಾಗರಭಾವಿ, ಬೆಂಗಳೂರು

ಸಾಕ್ಷಿಯನ್ನು ದಿಃ 25.09.2023 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯವಿಚಾರಣೆ: ಫ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-

1. ನ್ಯಾಯಾಲಯದ ಮುಂದಿರುವ ಆರೋಪಿಯು ಕರ್ನಾಟಕ ಅರ್ಬನ್ ಹೌಸಿಂಗ್ ಕೋ ಆಪರೇಟೀವ್ ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದ ಸಮಯದಲ್ಲಿ ಕಚೇರಿಯ ದಸ್ತಾವೇಜುಗಳಿಂದ ಕೆಲವೊಂದು ಪುಟಗಳನ್ನು ಹರಿದುಕೊಂಡು ಹೋಗಿ ತನ್ನ ಚಿಕ್ಕಮ್ಮನ ಮನೆಯಲ್ಲಿ ಇಟ್ಟಿರುವುದಾಗಿ ಪೊಲೀಸರಿಗೆ ಹೇಳಿದ್ದು ಅದರಂತೆ ಸದರಿ

ದಾಖಲೆಗಳನ್ನು ವಶಪಡಿಸಿಕೊಳ್ಳಲು ಜರುಗಿಸುವ ಪಂಚನಾಮೆಗೆ ಪಂಚರಾಗಿ ಸಹಕರಿಸಲು ನನ್ನನ್ನು ಕೋರಿದ್ದು ಅದರಂತೆ ದಿಃ27.04.2018 ರಂದು ಆರೋಪಿಯು ಪೊಲೀಸರ ಅಭಿರಕ್ಷೆಯಲ್ಲಿ ಇದ್ದಾಗ ಆತನು ತೋರಿಸಿದ ಜಾಗವಾದ ಮನೆ ನಂ.78, 17 ನೇ ಕ್ರಾಸ್, ಚೋಳರಪಾಳ್ಯ ಕ್ಕೆ ಬೆಳಿಗ್ಗೆ 10.30 ಘಂಟೆಗೆ ಆರೋಪಿತರೊಂದಿಗೆ ಚಾಸಾ 2 ಮತ್ತು ನಾನು ಹೋದಂತಹ ಸಮಯದಲ್ಲಿ ತಾನು ಮನೆಯಲ್ಲಿ ಇರಿಸಿದಂತಹ ಕಚೇರಿಯ ದಸ್ತಾವೇಜಿನಿಂದ ಹರಿದು ಇರಿಸಿದಂತಹ ಕೆಲವೊಂದು ಕಾಣೆಯಾದ ಪುಟ ಸಂಖ್ಯೆ 235 ರಿಂದ 269 ಮತ್ತು ಅದರ ಜೊತೆಗೆ ಲಗತ್ತಾಗಿದ್ದಂತಹ ಇನ್ನೊಂದು ಪುಟವನ್ನು ಹಾಜರುಪಡಿಸಿದ್ದು, ಈ ಕುರಿತು ಜಪ್ತು ಪಂಚನಾಮೆಯನ್ನು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.00 ವರೆಗೆ ಜರುಗಿಸಿ ಸದರಿ ಪುಟಗಳನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಜಪ್ತು ಪಂಚನಾಮೆಯನ್ನು ನಿಪಿ 1

ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಅದೇ ರೀತಿ ನಾನು ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ವಶಪಡಿಸಿಕೊಂಡ ದಾಖಲೆಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ.

(ಸೂಚನೆಃ ಈ ನ್ಯಾಯಾಲಯದ ಕಚೇರಿಯಲ್ಲಿ ಇರುವಂತಹ ಸುರಕ್ಷಾ ಅಭಿರಕ್ಷೆಯಲ್ಲಿ ಇದ್ದಂತಹ ದಾಖಲೆಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದ ಸಾಕ್ಷ್ಯದ ಮೇರೆಗೆ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇದೆ

IV ಎ.ಸಿ.ಎಂ.ಎಂ.ನ್ಯಾ,